ಕರ್ನಾಟಕ ಸರ್ಕಾರ

# ಪದವಿ ಪೂರ್ವ ಶಿಕ್ಷಣ ಇಲಾಖೆ

## ನಿರ್ದೇಶಕರ ಕಚೇರಿ, ಸಂಪಿಗೆ ರಸ್ತೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು – 12

**ಕ್ರಮ ಸಂಖ್ಯೆ : ಪಪೂಶಿಇ/ದ್ವಿಅಂ.ಶಾ/ಸುತ್ತೋಲೆ–01/2019–20** ದಿನಾಂಕ : 19–11–2019

## ಪರಿಷ್ಕೃತ ಸುತ್ತೋಲೆ

ರಾಜ್ಯದ ಎಲ್ಲಾ ಸರ್ಕಾರಿ, ಅನುದಾನಿತ, ಅನುದಾನರಹಿತ ಪದವಿ ಪೂರ್ವ ಕಾಲೇಜುಗಳಲ್ಲಿ ವ್ಯಾಸಂಗ ಮಾಡಿ ದ್ವಿತೀಯ ಪಿಯು ಪರೀಕ್ಷೆ ಬರೆದು ಉತ್ತೀರ್ಣರಾದ ಕೆಲವು ವಿದ್ಯಾರ್ಥಿಗಳ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳಲ್ಲಿ ವಿದ್ಯಾರ್ಥಿಯ ಹೆಸರು / ತಂದೆ ಹೆಸರು / ತಾಯಿಯ ಹೆಸರುಗಳಲ್ಲಿ ಲೋಪದೋಷಗಳಿದ್ದು, ಅವುಗಳ ತಿದ್ದುಪಡಿಗೆ ಅವಕಾಶವಿರುತ್ತದೆ ಹಾಗೂ ಕೆಲವು ವಿದ್ಯಾರ್ಥಿಗಳು ಹಲವಾರು ಕಾರಣಗಳಿಂದಾಗಿ ತಮ್ಮ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳನ್ನು ಕಳೆದುಕೊಂಡಿರುತ್ತಾರೆ. ಇಂತಹ ವಿದ್ಯಾರ್ಥಿಗಳ ಮನವಿಯ ಮೇರೆಗೆ ದ್ವಿತೀಯ ಪಿಯು ಉತ್ತೀರ್ಣ ಪ್ರಮಾಣ ಪತ್ರದ ದ್ವಿಪ್ರತಿಯನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ.

ದ್ವಿತೀಯ ಪಿಯು ಪರೀಕ್ಷೆ ಬರೆದು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳನ್ನು ಇಲಾಖೆಯಿಂದಲೇ ಕಾಲೇಜಿನ ಮುಖಾಂತರ ನೇರವಾಗಿ ವಿತರಿಸುತ್ತಿರುವುದರಿಂದ ದ್ವಿತೀಯ ಪಿಯು ಉತ್ತೀರ್ಣ ಪ್ರಮಾಣ ಪತ್ರವು ಪ್ರತಿಯೊಬ್ಬ ವಿದ್ಯಾರ್ಥಿಗೆ ತುಂಬಾ ಮಹತ್ವದ್ದಾಗಿರುತ್ತದೆ. ಇಂತಹ ಸಂದರ್ಭಗಳಲ್ಲಿ ವಿದ್ಯಾರ್ಥಿಯು ವ್ಯಾಸಂಗ ಮಾಡಿದ್ದ ಕಾಲೇಜಿನ ಪ್ರಾಚಾರ್ಯರ ಹೊಣೆಗಾರಿಕೆ ತುಂಬಾ ಮಹತ್ವವಾದುದು. **ಅದರಂತೆ, ಮೂಲ ಉತ್ತೀರ್ಣ ಪ್ರಮಾಣ ಪತ್ರಗಳನ್ನು ತಿದ್ದುಪಡಿ ಮಾಡುವ ಪ್ರಕರಣಕ್ಕೆ ಸಂಬಂಧಿಸಿದಂತೆ ಆಯಾ ಕಾಲೇಜಿನ ಪ್ರಾಚಾರ್ಯರು, ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯಲ್ಲಿನ ವಿವರಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರವೇ ಕಾಲೇಜಿನ ದಾಖಲಾತಿ ವಹಿಯಲ್ಲಿ ಯಥಾವತ್ತಾಗಿ ದಾಖಲಿಸಬೇಕು. ನಂತರ ದ್ವಿತೀಯ ಪಿಯು ಪರೀಕ್ಷೆಗೆ ಮುನ್ನ ಆನ್‌ಲೈನ್‌ನಲ್ಲಿ ಅಪ್‌ಲೋಡ್ (Online ನಲ್ಲಿ Upload) ಮಾಡುವಾಗ ವಿದ್ಯಾರ್ಥಿಗಳ ಎಸ್.ಎಸ್.ಎಲ್.ಸಿ. ಮೂಲ ಅಂಕಪಟ್ಟಿಯಲ್ಲಿರುವಂತೆ ಜಾಗರೂಕತೆಯಿಂದಾಗಿ Upload ಮಾಡಿದಲ್ಲಿ, ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಗೆ ಮುನ್ನ ನೀಡಲಾಗುವ ಪ್ರವೇಶ ಪತ್ರ (Admission Ticket) ಗಳಲ್ಲಿರುವ ನ್ಯೂನತೆಗಳನ್ನು ಸರಿಪಡಿಸಿಕೊಂಡಲ್ಲಿ ದ್ವಿತೀಯ ಪಿಯುಸಿ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳಲ್ಲಿ ತಪ್ಪುಗಳಾಗುವ ಸಾಧ್ಯತೆಗಳಿರುವುದಿಲ್ಲ.** ಆ ನಂತರವೂ ತಪ್ಪುಗಳಾದಲ್ಲಿ ಸದರಿ ತಪ್ಪುಗಳ ತಿದ್ದುಪಡಿಗಾಗಿ ವಿದ್ಯಾರ್ಥಿಗಳಿಂದ ಯಾವುದೇ ಶುಲ್ಕ ಪಡೆಯದೇ ಮೂಲ ಉತ್ತೀರ್ಣ ಪ್ರಮಾಣ ಪತ್ರಗಳಲ್ಲಿ ತಿದ್ದುಪಡಿ ಮಾಡಿಕೊಡುವ ಅವಕಾಶವಿರುತ್ತದೆ.

ಮೂಲ ಉತ್ತೀರ್ಣ ಪ್ರಮಾಣ ಪತ್ರವನ್ನು ವಿದ್ಯಾರ್ಥಿಗಳಿಗೆ ವಿತರಿಸುವ ಮೊದಲು ಆಯಾ ಕಾಲೇಜಿನ ಪ್ರಾಚಾರ್ಯರು, ಸಿಬ್ಬಂದಿಯ ಸಹಕಾರದೊಂದಿಗೆ ಉತ್ತೀರ್ಣ ಪ್ರಮಾಣ ಪತ್ರವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ವಿತರಿಸುವುದು ಸೂಕ್ತವಾಗಿರುತ್ತದೆ. ಒಂದು ವೇಳೆ ಉತ್ತೀರ್ಣ ಪ್ರಮಾಣ ಪತ್ರವನ್ನು ವಿತರಿಸುವ ಮುನ್ನ ತಪ್ಪುಗಳು ಕಂಡುಬಂದಲ್ಲಿ ಕಾಲೇಜಿನ ದಾಖಲೆಗಳೊಂದಿಗೆ ಹೋಲಿಸಿ ಪರಿಶೀಲಿಸಿದ ನಂತರ ಅವಶ್ಯ ದಾಖಲೆಗಳೊಂದಿಗೆ ಪ್ರಾಚಾರ್ಯರೇ ನೇರವಾಗಿ ಇಲಾಖೆಗೆ ತಿದ್ದುಪಡಿಗಾಗಿ ಪ್ರಸ್ತಾವನೆ ಸಲ್ಲಿಸಿ, ಮೂಲ ಉತ್ತೀರ್ಣ ಪ್ರಮಾಣ ಪತ್ರದಲ್ಲಿನ ಲೋಪದೋಷಗಳನ್ನು ಸರಿಪಡಿಸಿದ ನಂತರ ವಿದ್ಯಾರ್ಥಿಗಳಿಗೆ ವಿತರಿಸುವುದು ಸೂಕ್ತ. ಇದರಿಂದಾಗಿ ಮುಂದೆ ಉನ್ನತ ವ್ಯಾಸಂಗದ ಸಂದರ್ಭ, ಉದ್ಯೋಗಾವಕಾಶದ ಸಂದರ್ಭಗಳಲ್ಲಿ ವಿದ್ಯಾರ್ಥಿಗೆ ಆಗುವ ವಿನಾಕಾರಣದ ತೊಂದರೆಗಳನ್ನು ಹೋಗಲಾಡಿಸಿದಂತಾಗುತ್ತದೆ. ಇಂತಹ ಯಾವುದೇ ತಿದ್ದುಪಡಿಗಳಿಗಾಗಿ ವಿದ್ಯಾರ್ಥಿಯ ಮನವಿಯ ಮೇರೆಗೆ ಪ್ರಸ್ತಾವನೆ ಸಲ್ಲಿಸುವ ಹೊಣೆಯು ನೇರವಾಗಿ ಪ್ರಾಚಾರ್ಯರದ್ದೇ ಆಗಿರುತ್ತದೆ. ಯಾವುದೇ ಕಾರಣಕ್ಕೆ ವಿದ್ಯಾರ್ಥಿಯು ತನ್ನ ಮೂಲ ಉತ್ತೀರ್ಣ ಪ್ರಮಾಣ ಪತ್ರದ ತಿದ್ದುಪಡಿಗಾಗಿ ನೇರವಾಗಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸುವಂತಿಲ್ಲ. ಆದಾಗ್ಯೂ ಕೆಲವು ವಿದ್ಯಾರ್ಥಿಗಳು ನೇರವಾಗಿ ಇಲಾಖೆಯನ್ನು ಸಂಪರ್ಕಿಸುತ್ತಿರುವುದು ಕಂಡುಬಂದಿದೆ.

ತಿದ್ದುಪಡಿಗಳಿಗಾಗಿ ಸಲ್ಲಿಸುವ ಪ್ರಸ್ಥಾವನೆಗಳಲ್ಲಿ ಹಲವಾರು ನ್ಯೂನತೆಗಳಿದ್ದು, ಅಂತಹ ಪ್ರಸ್ಥಾವನೆಗಳನ್ನು ಇಲಾಖೆಯಿಂದ ತಿರಸ್ಕರಿಸಲಾಗುತ್ತಿದೆ. ಇದರಿಂದಾಗಿ ದೂರದ ಉತ್ತರ ಕರ್ನಾಟಕ ಮತ್ತು ಕರಾವಳಿ ಭಾಗದ ವಿದ್ಯಾರ್ಥಿಗಳಿಗೆ ತೀವ್ರ ತೊಂದರೆಯಾಗುತ್ತಿದ್ದು, ನ್ಯಾಯಾಲಯ ಪ್ರಕರಣಗಳಿಗೆ ಮತ್ತು ಮಾಹಿತಿ ಹಕ್ಕು ಅಧಿನಿಯಮದಡಿ ಪ್ರಕರಣಗಳಿಗೆ ದಾರಿ ಮಾಡಿಕೊಡುತ್ತಿದೆ. ಆದ್ದರಿಂದ ಈ ಸುತ್ತೋಲೆಯನ್ನು ಗಂಭೀರವಾಗಿ ಪರಿಗಣಿಸಿ, ಸಂಬಂಧಪಟ್ಟ ಪ್ರಾಚಾರ್ಯರು ಸೂಕ್ತ ರೀತಿಯಲ್ಲಿ ತಿದ್ದುಪಡಿಗಳಿಗಾಗಿ ಈ ಕೆಳಗಿನಂತೆ ಪ್ರಸ್ಥಾವನೆ ಸಲ್ಲಿಸಲು ಸೂಚಿಸಿದೆ.

1. ತಿದ್ದುಪಡಿಗಳಿಗಾಗಿ ಸಲ್ಲಿಸುವ ಎಲ್ಲ ಪ್ರಸ್ಥಾವನೆಗಳನ್ನು ಕಡ್ಡಾಯವಾಗಿ **ಉಪನಿರ್ದೇಶಕರು, ದ್ವಿಪ್ರತಿ ಅಂಕಪಟ್ಟಿ ಶಾಖೆ, ಪದವಿ ಪೂರ್ವ ಶಿಕ್ಷಣ ಇಲಾಖೆ, ಸಂಪಿಗೆ ರಸ್ತೆ, 18 ನೇ ಅಡ್ಡರಸ್ತೆ, ಮಲ್ಲೇಶ್ವರಂ ಬೆಂಗಳೂರು – 12** ಇಲ್ಲಿಗೆ **ಕಾಲೇಜಿನ ಪ್ರಾಚಾರ್ಯರ ಮೂಲಕ** ಸಲ್ಲಿಸಬೇಕು.

2. ತಿದ್ದುಪಡಿಗಾಗಿ ಮನವಿ ನೀಡಿದ ವಿದ್ಯಾರ್ಥಿಯ ಮೂಲ ಎಸ್.ಎಸ್.ಎಲ್.ಸಿ. ಅಂಕಪಟ್ಟಿಯೊಂದಿಗೆ, ದ್ವಿತೀಯ ಪಿಯು ಮೂಲ ಉತ್ತೀರ್ಣ ಪ್ರಮಾಣ ಪತ್ರದಲ್ಲಿನ ವಿವರಗಳನ್ನು ಪರಿಶೀಲಿಸಿದ ನಂತರ **ಆಗಿರುವ ಸಣ್ಣ ಪುಟ್ಟ ತಪ್ಪುಗಳನ್ನು ಖಚಿತಪಡಿಸಿಕೊಂಡು ಮೊದಲು ಕಾಲೇಜಿನ ದಾಖಲಾತಿ ವಹಿಯಲ್ಲಿ ತಿದ್ದುಪಡಿ ಮಾಡಬೇಕು.**

3. ಒಂದು ವೇಳೆ ವಿದ್ಯಾರ್ಥಿಯ / ತಂದೆಯ / ತಾಯಿಯ ಹೆಸರುಗಳನ್ನು ಬದಲಾಯಿಸಿಕೊಂಡಿದ್ದಲ್ಲಿ, ಬದಲಾವಣೆಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಆದೇಶವನ್ನು ಪಡೆದು, ಸದರಿ ಆದೇಶದಂತೆ ಬದಲಾಗಿರುವ ತಿದ್ದುಪಡಿಗಳನ್ನು ಮೊದಲು ಒಂದರಿಂದ ಹತ್ತನೇ ತರಗತಿಯವರೆಗೆ ವ್ಯಾಸಂಗ ಮಾಡಿದ್ದ ಶಾಲೆಗಳ ದಾಖಲಾತಿಗಳಲ್ಲಿ ಸರಿಪಡಿಸಿದ ನಂತರ, ಮುದ್ರಿತವಾದ ಎಸ್.ಎಸ್.ಎಲ್.ಸಿ. ಪರಿಷ್ಕೃತ ಅಂಕಪಟ್ಟಿಯನ್ನು ಪಡೆದು, ಸದರಿ **ತಿದ್ದುಪಡಿಗಳನ್ನು ಮೊದಲು ಕಾಲೇಜಿನ ದಾಖಲಾತಿ ವಹಿಯಲ್ಲಿ ತಿದ್ದುಪಡಿ ಮಾಡಬೇಕು.** (ಇಂತಹ ಸಂದರ್ಭಗಳಲ್ಲಿ ನ್ಯಾಯಾಲಯ ಆದೇಶದ ದೃಢೀಕೃತ ಪ್ರತಿಯನ್ನು ಪಡೆಯುವುದು ಕಡ್ಡಾಯ)

4. ಈ ರೀತಿ ತಿದ್ದುಪಡಿ ಮಾಡಿರುವ **ಕಾಲೇಜಿನ ದಾಖಲಾತಿ ವಹಿಯ ನಕಲು** ಪ್ರತಿಯನ್ನು ದೃಢೀಕರಿಸಿ ಸಲ್ಲಿಸುವುದು ಕಡ್ಡಾಯ.(**ದಾಖಲಾತಿ ವಹಿಯ ನಕಲು ಪ್ರತಿ** ಇಲ್ಲದ ಪ್ರಸ್ಥಾವನೆಗಳನ್ನು ಪರಿಗಣಿಸಲಾಗುವುದಿಲ್ಲ)

5. ತಿದ್ದುಪಡಿಗಾಗಿ ಇಲಾಖೆಗೆ ಪ್ರಸ್ಥಾವನೆಯನ್ನು ಸಲ್ಲಿಸುವಾಗ **ಮೂಲ ಎಸ್.ಎಸ್.ಎಲ್.ಸಿ. ಅಂಕಪಟ್ಟಿಗೆ ಬದಲಾಗಿ ದೃಢೀಕೃತ ನಕಲು ಪ್ರತಿಯನ್ನು ಮಾತ್ರ** ಸಲ್ಲಿಸುವುದು ಕಡ್ಡಾಯ.

6. ತಿದ್ದುಪಡಿ ಮಾಡಬೇಕಿರುವ **ದ್ವಿತೀಯ ಪಿಯು ಮೂಲ** ಉತ್ತೀರ್ಣ ಪ್ರಮಾಣ ಪತ್ರವನ್ನು **ಲ್ಯಾಮಿನೇಷನ್ ಮಾಡಿಸಿದ್ದರೆ, ಸೂಕ್ತವಾದ ತಾಂತ್ರಿಕ ಪದ್ಧತಿಯಲ್ಲಿ ಲ್ಯಾಮಿನೇಷನ್** ತೆಗೆಸಿ ತಿದ್ದುಪಡಿಯ ಪ್ರಸ್ಥಾವನೆಯನ್ನು ಸಲ್ಲಿಸುವುದು. ಇಲ್ಲವಾದಲ್ಲಿ ಮೂಲ ಉತ್ತೀರ್ಣ ಪ್ರಮಾಣ ಪತ್ರವು ಹಾಳಾಗುವ, ಹರಿದು ಹೋಗುವ ಸಾಧ್ಯತೆಗಳಿವೆ.

7. **ಮೇಲಿನ ಎಲ್ಲ ನಾಲ್ಕು ದಾಖಲೆಗಳೊಡನೆ ತಿದ್ದುಪಡಿಗಾಗಿ ಇಲಾಖೆಯು ನಿಗಧಿಪಡಿಸಿರುವ ನಮೂನೆಯನ್ನು ಪ್ರಾಚಾರ್ಯರು ಭರ್ತಿ ಮಾಡಿ, ಪ್ರಸ್ಥಾವನೆಯನ್ನು** ಸಲ್ಲಿಸುವುದು ಕಡ್ಡಾಯ. (ಕೆಲವು ಪ್ರಾಚಾರ್ಯರು ಈ ನಮೂನೆಗೆ ಬದಲಾಗಿ, **ತಮ್ಮ ಕಾಲೇಜಿನ ಲೆಟರ್ ಹೆಡ್ (College Letter head)** ನಲ್ಲಿ ಪ್ರಸ್ಥಾವನೆಯನ್ನು ಸಲ್ಲಿಸುತಿದ್ದಾರೆ)

8. ಇನ್ನು ಶುಲ್ಕಕ್ಕೆ ಸಂಬಂಧಿಸಿದಂತೆ **2018 ರ ಮಾರ್ಚ್ / ಜೂನ್** ಉತ್ತೀರ್ಣ ಪ್ರಮಾಣ ಪತ್ರದ ತಿದ್ದುಪಡಿಗಾಗಿ ಮಾತ್ರವೇ **ರೂ. 500/-** ಶುಲ್ಕವನ್ನು ನಿಗಧಿಪಡಿಸಿದೆ. ಮಿಕ್ಕ ಯಾವುದೇ ಸಾಲಿನ ಉತ್ತೀರ್ಣ ಪ್ರಮಾಣ ಪತ್ರಗಳ **ತಿದ್ದುಪಡಿಗಳಿಗೆ ಪ್ರಾಚಾರ್ಯರು ಕಾಲೇಜಿನ ಹೆಸರಿನಲ್ಲಾಗಲೀ, ಇಲಾಖೆಯ ಹೆಸರಿನಲ್ಲಾಗಲೀ ಯಾವುದೇ ಶುಲ್ಕಗಳನ್ನು ವಸೂಲಿ ಮಾಡಬಾರದು.**

9. 2018 ರ ಮಾರ್ಚ್ / ಜೂನ್ ಉತ್ತೀರ್ಣ ಪ್ರಮಾಣ ಪತ್ರಗಳ ತಿದ್ದುಪಡಿಗಾಗಿ ನಿಗಧಿಪಡಿಸಿರುವ ರೂ. 500/- ಶುಲ್ಕವನ್ನು ಖಜಾನೆ-2 ರ ಮೂಲಕ ಮಾತ್ರವೇ ಪಾವತಿಸುವುದು ಕಡ್ಡಾಯ.

10. ಪ್ರತಿಯೊಬ್ಬ ವಿದ್ಯಾರ್ಥಿಗೂ ಪತ್ಯೇಕ ಪ್ರಸ್ಥಾವನೆಯನ್ನು ಸಲ್ಲಿಸುವುದು. (ಕೆಲವು ಪ್ರಾಚಾರ್ಯರು ಎರಡು ಮೂರು ವಿದ್ಯಾರ್ಥಿಗಳ ತಿದ್ದುಪಡಿ ಪ್ರಸ್ಥಾವನೆಗಳನ್ನು ಕಾಲೇಜಿನ ಲೆಟರ್ ಹೆಡ್ (College Letter head) ಮೂಲಕ ಒಂದೇ ಪ್ರಸ್ಥಾವನೆಯಲ್ಲಿ ಸಲ್ಲಿಸುವುದು ಕಂಡುಬಂದಿದೆ. ಅಂತಹ ಪ್ರಸ್ಥಾವನೆಗಳನ್ನು ಪರಿಗಣಿಸಲಾಗುವುದಿಲ್ಲ)

ವಿದ್ಯಾರ್ಥಿಗಳಿಗೆ ಆಗುವ ಅನವಶ್ಯಕ ತೊಂದರೆಗಳನ್ನು ನಿವಾರಿಸುವ ಸಲುವಾಗಿ ಮೇಲಿನ ಎಲ್ಲ ಅಂಶಗಳನ್ನು ಪ್ರಾಚಾರ್ಯರು ಗಂಭೀರವಾಗಿ ಪರಿಗಣಿಸಿ ಪ್ರಸ್ಥಾವನೆಗಳನ್ನು ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ.

ನಿರ್ದೇಶಕರು
ಪದವಿ ಪೂರ್ವ ಶಿಕ್ಷಣ ಇಲಾಖೆ

ಪ್ರತಿಗಳನ್ನು ಅಗತ್ಯ ಕ್ರಮಕ್ಕಾಗಿ :
1. ನಿರ್ದೇಶಕರ ಆಪ್ತ ಶಾಖೆ
2. ಪರೀಕ್ಷಾ ಶಾಖೆ
3. ನಿರ್ದೇಶನಾಲಯದ ಅಂತರ್ಜಾಲ ಶಾಖೆ
4. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರಿಗೆ
5. ಜಿಲ್ಲಾ ಉಪನಿರ್ದೇಶಕರ ಮುಖಾಂತರ ಆಯಾ ಜಿಲ್ಲೆಗಳ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರುಗಳಿಗೆ
6. ಕಚೇರಿ ಪ್ರತಿ

# DMC Circular

**<u>ದ್ವಿತೀಯ ಪಿಯುಸಿ ಉತ್ತೀರ್ಣ ಪ್ರಮಾಣ ಪತ್ರದಲ್ಲಿನ ಲೋಪದೋಷಗಳ ತಿದ್ದುಪಡಿಗಾಗಿ ಸಲ್ಲಿಸುವ ಅರ್ಜಿ ನಮೂನೆ</u>**

**ಕ್ರಮ ಸಂಖ್ಯೆ :** **ದಿನಾಂಕ : / /2019**

| (ಕಾಲೇಜಿನ ಸಂಕೇತ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆಯೊಂದಿಗೆ ಸಂಪೂರ್ಣ ವಿಳಾಸವುಳ್ಳ ಮೊಹರು) |
|---|
| |

ಇವರಿಗೆ,

**ಮಾನ್ಯ ನಿರ್ದೇಶಕರು,**
ಪದವಿ ಪೂರ್ವ ಶಿಕ್ಷಣ ಇಲಾಖೆ,
18 ನೇ ಅಡ್ಡರಸ್ತೆ, ಸಂಪಿಗೆ ರಸ್ತೆ,
ಮಲ್ಲೇಶ್ವರಂ, ಬೆಂಗಳೂರು–12.

ಮಾನ್ಯರೆ,

ವಿಷಯ : ದ್ವಿತೀಯ ಪಿಯುಸಿ ಉತ್ತೀರ್ಣ ಪ್ರಮಾಣ ಪತ್ರದಲ್ಲಿ ಆಗಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡಿ ಸರಿಪಡಿಸುವ ಕುರಿತು.

* * * * *

ನಮ್ಮ ಕಾಲೇಜಿನಲ್ಲಿ ಅಭ್ಯಾಸ ಮಾಡಿ ________ ರ ಮಾರ್ಚ್ / ಜುಲೈ ತಿಂಗಳ ಪರೀಕ್ಷೆಯಲ್ಲಿ ಉತ್ತೀರ್ಣರಾದ ______________________ ಇವರ ಉತ್ತೀರ್ಣ ಪ್ರಮಾಣ ಪತ್ರದಲ್ಲಿ ಆಗಿರುವ ಲೋಪದೋಷಗಳನ್ನು ತಿದ್ದುಪಡಿ ಮಾಡುವ ಸಲುವಾಗಿ ನಿಗದಿತ ನಮೂನೆಯಲ್ಲಿ ಮಾಹಿತಿಯನ್ನು ಸಲ್ಲಿಸುತ್ತಿದ್ದೇನೆ.

ತಮ್ಮ ನಂಬುಗೆಯ,

(ಪ್ರಾಚಾರ್ಯರ ಸಹಿ ಮತ್ತು ಮೊಹರು)

**<u>ಅಡಕಗಳು</u> :**

1. ಲ್ಯಾಮಿನೇಷನ್ ತೆಗೆಸಿರುವ ದ್ವಿತೀಯ ಪಿಯುಸಿ ಮೂಲ ಉತ್ತೀರ್ಣ ಪ್ರಮಾಣ ಪತ್ರ
2. ಎಸ್.ಎಸ್.ಎಲ್.ಸಿ ಅಂಕಪಟ್ಟಿಯ ದೃಢೀಕೃತ ಪ್ರಮಾಣ ಪತ್ರ
3. ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ತಿದ್ದುಪಡಿ ಮಾಡಲಾದ ಕಾಲೇಜಿನ ದಾಖಲಾತಿ ವಹಿಯ ದೃಢೀಕೃತ ಪ್ರತಿ
4. **2018 ರ ಮಾರ್ಚ್ / ಜುಲೈ ತಿಂಗಳ ಉತ್ತೀರ್ಣ ಪ್ರಮಾಣ ಪತ್ರಕ್ಕಾಗಿ ಮಾತ್ರ ರೂ. 500/–ರ** ಖಜಾನೆ–2 ರ ಮೂಲ ಚಲನ್ ಪ್ರತಿ

**: <u>ನಮೂನೆ</u> :**

_ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂಬ ವಿದ್ಯಾರ್ಥಿಯು ನಮ್ಮ ಕಾಲೇಜಿನಲ್ಲಿ ದಾಖಲಾತಿ ಸಂಖ್ಯೆ _ _ _ _ _ _ ವರ್ಷ _ _ _ _ ರಲ್ಲಿ ದಾಖಲಾಗಿದ್ದು, ದ್ವಿತೀಯ ಪಿಯುಸಿ ಪ್ರಮಾಣ ಪತ್ರದಲ್ಲಿ ವಿದ್ಯಾರ್ಥಿಯ ಹೆಸರು _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂದು, ತಂದೆಯ ಹೆಸರು _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂದು, ತಾಯಿಯ ಹೆಸರು _ _ _ _ _ _ _ _ _ _ _ _ _ _ _ _ _ _ _ _ _ _ ಎಂದು ತಪ್ಪಾಗಿ ನಮೂದಾಗಿದೆ.

ಆದರೆ ಎಸ್.ಎಸ್.ಎಲ್.ಸಿ ಮೂಲ ಅಂಕಪಟ್ಟಿಯಲ್ಲಿರುವಂತೆ ಈ ಕಾಲೇಜಿನ ದಾಖಲಾತಿ ಪುಸ್ತಕದಲ್ಲಿ ವಿದ್ಯಾರ್ಥಿಯ ಹೆಸರು _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂದು, ತಂದೆಯ ಹೆಸರು _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂದು, ತಾಯಿಯ ಹೆಸರು _ _ _ _ _ _ _ _ _ _ _ _ _ _ _ _ _ _ _ _ _ _ _ _ ಎಂದು ಸರಿಯಾಗಿ ನಮೂದಾಗಿರುತ್ತದೆ.

ಈ ವಿದ್ಯಾರ್ಥಿಯ ಎಸ್.ಎಸ್.ಎಲ್.ಸಿ ಪರೀಕ್ಷೆಯ ನೊಂದಣಿ ಸಂಖ್ಯೆ : _ _ _ _ _ _ _ _ ವರ್ಷ _ _ _ _ ಏಪ್ರಿಲ್ / ಜುಲೈ / ಅಕ್ಟೋಬರ್ ತಿಂಗಳಲ್ಲಿ ತೇರ್ಗಡೆಯಾಗಿದ್ದಾರೆ ಎಂದು ದೃಢೀಕರಿಸುತ್ತೇನೆ.

ತಮ್ಮ ನಂಬುಗೆಯ,

(ಪ್ರಾಚಾರ್ಯರ ಸಹಿ ಮತ್ತು ಮೊಹರು)

**ವಿಶೇಷ ಸೂಚನೆ :**

1. ಮೇಲಿನ ನಮೂನೆಯಲ್ಲಿ ವಿದ್ಯಾರ್ಥಿ/ತಂದೆ/ತಾಯಿಯ ಹೆಸರುಗಳನ್ನು **English** ನಲ್ಲಿ ದಪ್ಪ ಅಕ್ಷರಗಳಲ್ಲಿ ಬರೆಯುವುದು.
2. ದ್ವಿತೀಯ ಪಿಯುಸಿ ಉತ್ತೀರ್ಣ ಪ್ರಮಾಣ ಪತ್ರದ ಮೂಲ ಪ್ರತಿ (**ಲ್ಯಾಮಿನೇಟ್ ಆಗಿದ್ದಲ್ಲಿ, ಎರಡೂ ಬದಿಯ ಲ್ಯಾಮಿನೇಷನ್ ಅನ್ನು ಸೂಕ್ತ ರೀತಿಯ ತಾಂತ್ರಿಕ ಪದ್ಧತಿಯಲ್ಲಿ ತೆಗೆಸಿ**) ಯನ್ನು ಸಲ್ಲಿಸಬೇಕು.
3. ಅಭ್ಯರ್ಥಿಯು ದ್ವಿತೀಯ ಪಿಯುಸಿಯಲ್ಲಿ ಉತ್ತೀರ್ಣ ಹೊಂದಿದ ನಂತರ, ನ್ಯಾಯಾಲಯ / ಇತರೆ ಆದೇಶಗಳಂತೆ ಅಭ್ಯರ್ಥಿಯ / ತಂದೆ / ತಾಯಿಯ **ಹೆಸರನ್ನು ಬದಲಾಯಿಸಿಕೊಂಡಿದ್ದಲ್ಲಿ, S.S.L.C. ಅಂಕಪಟ್ಟಿಯಲ್ಲಿ** ತಿದ್ದುಪಡಿಯಾದ ನಂತರ, **S.S.L.C ಪರಿಷ್ಕೃತ ಅಂಕಪಟ್ಟಿಯಲ್ಲಿರುವಂತೆ, ಮೊದಲು ಕಾಲೇಜಿನ ದಾಖಲಾತಿ ಪುಸ್ತಕದಲ್ಲಿ, ತಿದ್ದುಪಡಿ ಮಾಡಿ**, ಸದರಿ ಪುಟವನ್ನು ಜೆರಾಕ್ಸ್ ಮಾಡಿಸಿ, ಪ್ರಾಚಾರ್ಯರು ದೃಢೀಕರಿಸಿ, ನ್ಯಾಯಾಲಯ / ಇತರೆ **ಆದೇಶಗಳ ದೃಢೀಕೃತ ಪ್ರತಿಯೊಂದಿಗೆ ಪ್ರಸ್ತಾವನೆ** ಸಲ್ಲಿಸಬೇಕು.

# Application form for Marks card correction.